**(ಇಂದು ದಿಃ 14-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- 1 ರಿಂದ 4 ನೇ ಪ್ರತಿವಾದಿ ಪರ ಶ್ರೀ.SDR ವಕೀಲರಿಂದಃ-**

ನಾನು ಅ ವಿದ್ಯಾವಂತೆ. ದಾವಾ ಸರ್ವೇ ನಂಬರ ನನಗೆ ಗೊತ್ತಿಲ್ಲ. 1 ಎಕರೆ ಚಿಲ್ಲರೆ ಜಮೀನಿಗೆ ದಾವೆ ಸಲ್ಲಿಸಿದ್ದೇನೆ. ದಾವಾ ಸ್ವತ್ತಿನ ಚೆಕ್ ಬಂದಿ ನನಗೆ ಗೊತ್ತಿಲ್ಲ. ನನ್ನ ತಂದೆ ಹೆಸರು ಬೀಕುಸಿಂಗ್ . ಅವರು ತೀರಿ ಹೋಗಿ ಸುಮಾರು 40 ವರ್ಷ ಆಗಿದೆ. ನನ್ನ ದಾವೆಯಲ್ಲಿ ನನ್ನ ತಂದೆ ದಿನಾಂಕ 22.02.2023 ರಂದು ತೀರಿ ಹೋಗಿದ್ದಾರೆ ಎಂದು ಹೇಳಿ ಬರೆಸಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ನಾನು ನೋಡಿದ್ದೇನೆ. ದಾವಾ ಆಸ್ತಿಯಲ್ಲಿ ಎಷ್ಟು ಎಕರೆ ಕಂಪನಿಗೆ ಹೋಗೆದೆ ನನಗೆ ಗೊತ್ತಿಲ್ಲ. ನನ್ನ ದಾವೆಯಲ್ಲಿ 17 ಎಕರೆ 08 ಗುಂಟೆ ಕಂಪನಿಗೆ ಹೋಗಿದೆ ಎಂದು ಹೇಳಿ ಬರೆಸಿದ್ದೇನೆ ಎಂದರೆ ಸರಿ. 7 ನೇ ಪ್ರತಿವಾದಿ ಎಷ್ಟು ವರ್ಷಗಳ ಹಿಂದೆ ಜಮೀನಿನ ಕಬ್ಜಾ ಪಡೆದುಕೊಂಡು ಎಂದರೆ ಹೇಳಲು ಆಗುವುದಿಲ್ಲ. 7ನೇ ಪ್ರತಿವಾದಿಯಿಂದ ಎಷ್ಟು ಪರಿಹಾರ ಹಣ ಬಂದಿತು ನನಗೆ ಗೊತ್ತಿಲ್ಲ. ಯಾವ ವರ್ಷ ಪರಿಹಾರ ಬಂದಿತು ನನಗೆ ಗೊತ್ತಿಲ್ಲ. ಪರಿಹಾರದ ಹಣ ನನ್ನ ತಂದೆ ಪಡೆದುಕೊಂಡಿದ್ದರು. ಪರಿಹಾರದ ಹಣದಲ್ಲಿ ನನಗೆ ಭಾಗ ಕೊಟ್ಟಿಲ್ಲ. ನಾನು ಪರಿಹಾರದ ಹಣದಲ್ಲಿ ಭಾಗ ಪಡೆದುಕೊಂಡಿದ್ದರು ಕೂಡ ಪಡೆದುಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದಾಗ ಪರಿಹಾರದ ಹಣದಲ್ಲಿ ನನಗೆ ಭಾಗ ಕೊಡಿ ಎಂದು ನಾನು ನನ್ನ ತಂದೆಯನ್ನು ಕೇಳಿಲ್ಲ. ದಾವಾ ಆಸ್ತಿಯಲ್ಲಿ ನನ್ನ ತಂದೆ ಬದುಕಿದ್ದಾಗ ಭಾಗ ಕೇಳಿದ್ದೆ. ಎಷ್ಟು ವರ್ಷ ದ ಹಿಂದೆ ಭಾಗ ಕೇಳಿದ್ದೆ ಹೇಳಲು ಆಗುವುದಿಲ್ಲ. 1 ರಿಂದ 4 ನೇ ಪ್ರತಿವಾದಿಯರ ಬಳಿ ಭಾಗ ಕೇಳಿದ್ದೆ.

OS No. 50/2024
PW-2

ದಾವಾ ಆಸ್ತಿ 1 ಎಕರೆ 11 ಗುಂಟೆ 1ನೇ ಪ್ರತಿವಾದಿ ಹೆಸರಿನಲ್ಲಿದೆ. ಎಷ್ಟು ವರ್ಷಗಳಿಂದ 1ನೇ ಪ್ರತಿವಾದಿ ಹೆಸರಿಗೆ ಪಹಣಿ ಬರುತ್ತಿದೆ ನನಗೆ ಗೊತ್ತಿಲ್ಲ. 17 ಎಕರೆ 8 ಗುಂಟೆ 7ನೇ ಪ್ರತಿವಾದಿ ಹೆಸರಿನಲ್ಲಿದೆ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಭಾಗ ಇಲ್ಲದಿದ್ದರು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**

OS No. 50/2024
PW-2

**(ಇಂದು ದಿಃ 14-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- 1 ರಿಂದ 4 ನೇ ಪ್ರತಿವಾದಿ ಪರ ಶ್ರೀ.SDR ವಕೀಲರಿಂದಃ-</u>**

ನಾನು 5 ತರಗತಿಯವರೆಗೆ ಓದಿದ್ದೇನೆ. ನಾನು ನನ್ನ ಸಹೋದರನ ಮೇಲೆ ಈ ದಾವೆ ಸಲ್ಲಿಸಿದ್ದೇನೆ. ದಾವಾ ಆಸ್ತಿಯ ಸರ್ವೇ ನಂಬರ ಮತ್ತು ಚೆಕ್ ಬಂದಿ ನನಗೆ ಗೊತ್ತಿಲ್ಲ, 1 ಎಕರೆ ಚಿಲ್ಲರೆ ಗುಂಟೆಗೆ ದಾವೆ ಸಲ್ಲಿಸಿದ್ದೇನೆ. ನನ್ನ ತಂದೆ ತೀರಿ ಹೋಗಿ ಸುಮಾರು 30 ವರ್ಷ ಆಗಿದೆ. ನನ್ನ ತಂದೆ ತೀರಿ ಹೋಗಿ ಸುಮಾರು 30 ವರ್ಷ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇಂನೆ ಎಂದೆರ ಸರಿಯಲ್ಲ, 7 ನೇ ಪ್ರತಿವಾದಿ 17 ಎಕರೆ 8 ಗುಂಟೆ ಸ್ವಾ ದೀನಪಡಿಸಿಕೊಂಡಿದ್ದಾರೆ ಎಂದೆರ ಸರಿ . 7 ನೇ ಪ್ರತಿವಾದಿ 30 ವರ್ಷಃ ಗಳ ಹಿಂದೆ ಜಮೀನು ಸ್ವಾ ದೀನ ಪಡಿಸಿಕೊಂಡಿದ್ದಾರೆ. ಒಂದು ಎಕರೆಗೆ 7,000/- ಕೊಟ್ಟಿದ್ದರು. ಪ್ರತಿವಾದಿಯರು ಹಣ ಪಡೆದುಕೊಂಡಿದ್ದರು. ಸದರಿ ಪರಿಹಾರ ಹಣದಲ್ಲಿ ನಾನು ಭಾಗ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ, ನನ್ನ ತಂದೆ ಬದುಕಿದ್ದಾಗ ನಾನು ಭಾಗ ಕೇಳಿಲ್ಲ, 1 ರಿಂದ 4 ನೇ ಪ್ರತಿವಾದಿಯರ ಬಳಿ ಭಾಗ ಕೇಳಿದ್ದೆ ಅವರು ಕೊಟ್ಟಿಲ್ಲ, ಸುಮಾರು 30 ವರ್ಷ ಗಳ ಹಿಂದೆ ಭಾಗ ಕೇಳಿದ್ದೆ . ದಾವಾ ಆಸ್ತಿ 1ನೇ ಪ್ರತಿವಾದಿಯ ಹೆಸರಿನಲ್ಲಿದೆ. 6 ತಿಂಗಳ ಹಿಂದೆ 1ನೇ ಪ್ರತಿವಾದಿ ದಾವಾ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದಾರೆ. 6 ತಿಂಗಳ ಹಿಂದೆ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಭಾಗ ಇಲ್ಲದಿದ್ದರು 1 ರಿಂದ 4ನೇ ಪ್ರತಿವಾದಿಯರಿಗೆ ತೊಂದರೆ ಕೋಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**

OS No. 50/2024

PW-2